ಗಮನಕ್ಕೆ ಬಂದಾಗ, ಇಲಾಖೆ ವಿಚಾರಣೆ ನಡೆಸಿದ್ದು, ಆ ಸಂಸ್ಥೆಯಲ್ಲಿ ಆಗ ಪ್ರಾಂಶುಪಾಲರಾಗಿ ಕೆಲಸ ಮಾಡುತ್ತಿದ್ದು ಶ್ರೀ ಆರ್.ಜಯರಾಮ, ಇವರು ರೂ. 16,514-00 ಹಣವನ್ನು ಸರ್ಕಾರಕ್ಕೆ ನಷ್ಟು ಉಂಟುಮಾಡಿರುವುದು ಸಾಬೀತಾಗಿದ್ದು, ಅವರಿಂದ ಈ ಹಣವನ್ನು ಸರ್ಕಾರಕ್ಕೆ ಪಡೆಯಲಾಗಿದೆ. ಅಲ್ಲದೇ, ವಿದ್ಯುತ್ ವಿಭಾಗದ ಉಪನ್ಯಾಸಕರಾಗಿದ್ದು ಶ್ರೀ ಕೆ.ವಿ. ನಂಜುಂಡೇಗೌಡ ಅವರಿಂದ ಕೂಡಾ ರೂ. 8,257-00 ಹಣ. ವಸೂಲಿ ಮಾಡಲು ಕ್ರಮ ಜರುಗಿಸವ ಸಂದರ್ಭದಲ್ಲಿ ಅವರು ಕರ್ನಾಟಕ ಆಡಳಿತ ಮಂಡಲಿಯಲ್ಲಿ ಅರ್ಜಿ ಸಲ್ಲಿಸಿ, ಸರ್ಕಾರದ ಆದೇಶವನ್ನು ಪ್ರಶ್ನಿಸಿದ ಮೇರೆಗೆ, ಕರ್ನಾಟಕ ಆಡಳಿತ ಮಂಡಲಿಯವರು, ಸರ್ಕಾರದ ಆದೇಶವನ್ನು ಅನೂರ್ಜಿತಗೊಳಿಸಿದ್ದು, ಈ ಬಗ್ಗೆ ಸುಪ್ರೀಂ ಕೋರ್ಟಿನಲ್ಲಿ ಮೇಲ್ಮನವಿ ಸಲ್ಲಿಸಲಾಗಿದೆ.

ಕಛೇರಿಯ ಸಿಬ್ಬಂದಿಯವರಾದ ಶ್ರೀ ಟಿ. ರಾಮಕೃಷ್ಣಯ್ಯ ಹಾಗೂ ಶ್ರೀ ಹೆಚ್.ಎಲ್. ರಾಮಕೃಷ್ಣ ಇವರುಗಳನ್ನು ಆರೋಪಗಳಿಂದ ವಿಮುಕ್ತಿಗೊಳಿಸಲಾಗಿದೆ.

2) ತಾಂತ್ರಿಕ ನಿರ್ದೇಶನಾಲಯದ ನಗರ ವಿಭಾಗದಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ :

ರೂ. 1,36,440-75 ಹಣ ಸ್ಕೂಲ್ ಆಫ್ ಪ್ರಿಂಟಿಂಗ್, ಬೆಂಗಳೂರು ಇಲ್ಲಿಗೆ ಜಮಾ ಆಗಬೇಕಾಗಿದ್ದು, ಅದು ಜಮಾ ಆಗಿದೆ ಎಂದು ನಗದು ಪುಸ್ತಕದಲ್ಲಿ ಖರ್ಚು ಹಾಕಲಾಗಿದ್ದು, ಇದು ಜಮಾ ಆಗಿಲ್ಲವೆಂದು ಸ್ಕೂಲ್ ಆಫ್ ಪ್ರಿಂಟಿಂಗ್‌ನ ಪ್ರಾಂಶುಪಾಲರು, ಗಮನಕ್ಕೆ ತಂದಾಗ, ಶ್ರೀ ಎಂ. ನಾಗರಾಜ, ನಗದಿ ಗುಮಾಸ್ತರು ಇವರನ್ನು ದಿನಾಂಕ 4-6-90 ರಿಂದ ವಿಚಾರಣೆಯನ್ನು ಪೆಂಡಿಂಗ್ ಇಟ್ಟು, ನಿಲಂಬನೆಯಲ್ಲಿಡಲಾಗಿದೆ. ಮೇಲ್ನೋಟಕ್ಕೆ ರುಜುವಾತಾಗಿ ಕಂಡು ಬಂದ ಕೆಲವು ಆರೋಪಗಳ ಬಗ್ಗೆ ಹಿಂದಿನ ಲೆಕ್ಕಾಧಿಕಾರಿಗಳ ವರದಿಯ ಮೇರೆಗೆ ಇಲಾಖಾ ತನಿಖೆ ನಡೆಸಲು ಆಜ್ಞಾಪಿಸಲಾಗಿದೆ. ವಿಚಾರಣೆ ಮುಂದುವರಿದಿದ್ದು, ಅದರ ವರದಿಯನ್ನು ನಿರೀಕ್ಷಿಸಲಾಗಿದೆ. ಇಂತಹ ಅವ್ಯವಹಾರದ ಇನ್ನೂ ಕೆಲವು ಪ್ರಕರಣಗಳು ಇರಬಹುದೆಂದು, ಶಂಕಿಸಿ, ವಿಶೇಷ ಆಡಿಟ್ ಮಾಡಲು ಮಹಾಲೇಖಪಾಲಕರಿಗೆ ತಿಳಿಸಿದ್ದು, ಮಹಾಲೇಖಪಾಲಕರ ಆಡಿಟ್ ವರದಿಯನ್ನು ನಿರೀಕ್ಷಿಸಲಾಗಿದೆ. ಮಹಾಲೇಪಾಲಕರ ವರದಿ ಬಂದ ನಂತರ ಮುಂದಿನ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಸಯ್ಯದ್ ಗಫಾರ್, ಶ್ರೀ ಎಸ್.ಎಂ. ಗುರುಲಿಂಗಸ್ವಾಮಿ ಮತ್ತು ಶ್ರೀ ಟಿ.ಆರ್.ಶ್ರೀನಿವಾಸರಾವ್, ಕ್ರಮವಾಗಿ ದಿನಾಂಕ 15-9-87ರ ವರೆವಿಗೆ 18-9-87ರಿಂದ 30-6-88ರ ವರೆವಿಗೆ, ದಿನಾಂಕ 1-7-88 ರಿಂದ 13-6-90ರ ವರೆವಿಗೆ, ಅಧೀಕ್ಷಕರಾಗಿ ಇಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಇವರ ಪೈಕಿ ಶ್ರೀ ಸಯ್ಯದ್ ಗಫಾರ್ ರವರು ದಿನಾಂಕ 13-11-88ರಂದು ನಿಧನಹೊಂದಿದ್ದಾರೆ. ಉಳಿದ ಇಬ್ಬರನ್ನು ಅಮಾನತ್ತಿನಲ್ಲಿಡಲಾಗಿದೆ.

3) ಪ್ರಥಮ ಬಿ.ಇ, ಎಂ.ಬಿ.ಬಿ.ಎಸ್. ಸಾಮಾನ್ಯ ಪರೀಕ್ಷೆಗೆ ವಸೂಲಿ ಮಾಡಿದ ಹಣದ ಕುರಿತು :

ಈ ಸಾಮಾನ್ಯ ಪ್ರವೇಶ ಪರೀಕ್ಷೆಗಳನ್ನು ಸರ್ಕಾರಿ ಆದೇಶ ಸಂ : ಇಡಿ ಟಿಇಸಿ 84, ದಿನಾಂಕ 21-6-84ರ ಪ್ರಕಾರ, ಬೆಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳ ಅಧ್ಯಕ್ಷತೆಯಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಸದಸ್ಯ-ಕಾರ್ಯದರ್ಶಿಯಾಗಿ, ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಮತ್ತು ಇನ್ನಿತರ ಸದಸ್ಯರ ನೇತೃತ್ವದಲ್ಲಿ ನಡೆಸಲಾಗುತ್ತಿದ್ದು, ಈ ಸಮಿತಿಯ ಆದೇಶಾನುಸಾರ ಸದಸ್ಯ-ಕಾರ್ಯದರ್ಶಿಯವರು, ಈ ಪರೀಕ್ಷೆ ನಡೆಸುವ ಸಂದರ್ಭದಲ್ಲಿ ತಗಲುವ ಖರ್ಚು ವೆಚ್ಚಗಳನ್ನು ಮಾಡಲು ಅಧಿಕಾರ ಪಡೆದಿದ್ದಾರೆ. ರಾಜ್ಯ ಲೆಕ್ಕ ಪತ್ರ ಇಲಾಖೆಯ ಅಧಿಕಾರಿಗಳಿಂದ ಇಂಟರನಲ್ ಆಡಿಟ್ ಆಗಿಂದ್ದಾಗ್ಗೆ ಮಾಡಿಸಲಾಗಿದೆ.